





ಇವರು ನಮ್ಮ ಅಂಗನವಾಡಿ ಟೀಚರ್... ಮೊದಲು ಬೆಂಕಿಕಡ್ಡಿ ಇದ್ದ ಹಾಗೆ ಇದ್ರು!




ನಾವು ಜನರೇಟರ್ ತಂದಾಗಿನಿಂದ, ನಮ್ಮ ಯಜಮಾನರು ಎಲ್ಲಿ ಹೋದರೂ ಕ್ಯಾನ್ ಹಿಡಿದುಕೊಂಡೇ ಹೋಗುತ್ತಾರೆ!




### ಮೊನಚಾದ ಬರಹ

ನ.22ರ ಮುಖಪುಟ ಲೇಖನ ‘ಅಮ್ಮ, ಮಗು ಆಫೀಸು’ ಮಹಿಳೆಯ ಸ್ಥಿತಿಯನ್ನು ಡಿ.ಕೆ.ರಮೇಶ್ ಮೊನಚಾದ ಶೈಲಿಯಲ್ಲಿ ನಿರೂಪಿಸಿದ್ದಾರೆ. ಎರಡು ದೋಣಿಯಲ್ಲಿ ಕಾಲಿಟ್ಟು ಸಮತೋಲನ ತಪ್ಪದಂತೆ ಸಾಗುವಂತಹ ಸವಾಲು ಮಹಿಳೆಯದು.

–ಪಿ.ಗೋವಿಂದರಾಜ್, ಶಿವಮೊಗ್ಗ/ ವಿಭಾ ಮುರಳೀಧರ್, ತುಮಕೂರು

### ಬೆಂಗಳೂರೇ ಬದುಕಲ್ಲ!

ಬೆಂಗಳೂರು ನಗರ ಕೇಂದ್ರಿತ ಜೀವನಶೈಲಿಯೇ ಸ್ವಯಂಪೂರ್ಣ ಬದುಕು ಎಂದು ಭಾವಿಸಿ ಲೇಖಕರು ಬರೆದಿದ್ದಾರೆ. ಹಳ್ಳಿ ಬದುಕಿನಲ್ಲಿ ಲಾಗಾಯ್ತಿನಿಂದಲೂ ಮಹಿಳೆ ಬೆಳಗಿನ ಜಾವ 5ಕ್ಕೆ ಎದ್ದು ಮನೆ ಒಳಗೆ– ಹೊರಗೆ ಎರಡೂ ಕಡೆ ಕೆಲಸ ಮಾಡುತ್ತಾಳೆ. ಹಳ್ಳಿ ಹೋಗಲಿ ಬಿಡಿ, ಬೆಂಗಳೂರು ಹೊರತುಪಡಿಸಿದ ಬೇರೆ ಪಟ್ಟಣಗಳಲ್ಲೂ ಸ್ಥಿತಿ ಸ್ವಲ್ಪ ಭಿನ್ನ ಇದೆ. ಆ ಕುರಿತ ಬರಹಗಳು ಮತ್ತು ಬೇರೆ ಭಾಗದ ತಜ್ಞರ ಸಂದರ್ಶನಗಳೂ ಮೂಡಿಬಂದಿದ್ದರೆ ಪೂರ್ಣತೆ ಬರುತ್ತಿತ್ತು.

–ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ/ ವಿ.ಆರ್.ಬಿರಾದಾರ, ಜೇವರಗಿ/ ಆರ್.ರಮಾಮಣಿ, ಎಚ್.ಎಸ್.ವಿಶ್ವನಾಥ, ಶಿವಮೊಗ್ಗ

### ಅಚ್ಚರಿ ತಂದ ಕವಿತಾ ನಿಲುವು

ಮದುವೆ, ಗಂಡ ಯಾವುದೂ ಬೇಡ, ಆದರೆ ಮಗು ಬೇಕು– ಹಾಗಾಗಿ ತಾಯಿಯಾಗಿದ್ದೇನೆ ಎಂಬ ಕವಿತಾ ಲಂಕೇಶ್ ಅವರ ನಿಲುವು ಅಚ್ಚರಿ ಉಂಟು ಮಾಡಿತು.

–ಬಿ.ಚಂದ್ರೇಗೌಡ, ಬೆಂಗಳೂರು

### ಹೀಗೂ ಇರಬಲ್ಲಳು

ಹೆಣ್ಣು ಹೀಗೂ ಬದುಕ ಬಲ್ಲಳೆಂಬುದನ್ನು ಕವಿತಾ ಲಂಕೇಶ್ ತೋರಿಸಿಕೊಟ್ಟಿದ್ದಾರೆ ಮತ್ತು ‘ಒಂಟಿ ಪಾಲಕಿ ಸ್ವಗತ’ ಲೇಖನದಲ್ಲಿ ಅದನ್ನು ನಿರ್ಭೀತ ಹಾಗೂ ನಿರ್ಭಿಡೆಯಿಂದ ಹೇಳಿಕೊಂಡಿದ್ದಾರೆ. ನಿಮ್ಮ ಆತ್ಮವಿಶ್ವಾಸ ಹಾಗೂ ಧೈರ್ಯ ಮೆಚ್ಚುವಂತಹದು.

–ಕೊಹಿಮ, ಬಸರಕೋಡ/ ಬಿ.ಸುಪ್ರಿಯಾ, ಗುಲ್ಬರ್ಗ/ ಪಿ.ಮಂಜುಳ, ಎಚ್.ರೂಪ, ಹಾಸನ/ ರೇಣುಕಾ ವಿಶ್ವನಾಥ್, ಬೆಂಗಳೂರು

### ತಮಗೆ ಬೇಕು, ಮಗುವಿಗೆ ಬೇಡವೆ?

ಸಾಹಿತಿ ಲಂಕೇಶ್ ಅವರ ಪ್ರೀತಿಯ ಮಗಳಾದ ಕವಿತಾ ತಮ್ಮ ಹೆಸರಿನ ಪಕ್ಕ ಅಪ್ಪನ ಹೆಸರನ್ನು ಹೆಮ್ಮೆಯಿಂದ ಹಾಕಿಕೊಂಡಿದ್ದಾರೆ. ತಾವುಂಡ ಅಪ್ಪನ ಅಕ್ಕರೆ, ಮಾರ್ಗದರ್ಶನ ಮಗುವಿಗೆ ಬೇಡವೆಂದು ತೀರ್ಮಾನಿಸಿರುವುದು ವಿಷಾದಕರ.

–ಕೆ.ಕೃಷ್ಣಕುಮಾರಿ, ಬೆಂಗಳೂರು

### ಚಿಂತನಾರ್ಹ ವಿಚಾರ

ಶಿಕಾಕುರ ‘ಬಂಧನ ಪ್ರಿಯ ಜೀವಿ!’ ವಿಚಾರ ಲಹರಿ ಚಿಂತನೆಗೆ ಎಡೆ ಮಾಡಿಕೊಟ್ಟಿದೆ.

–ನೆ.ಲ.ರಾಂ., ಬೆಂಗಳೂರು

### ಕಠ್ಮಂಡು ಹೆಸರಿಗೆ ಕಾರಣ

ಕಠ್ಮಂಡು ಹೆಸರು ಹೇಗೆ ಬಂತು ಎಂಬುದನ್ನು ಸಂತೋಷ ಅನಂತಪುರ ಪ್ರವಾಸ ಲೇಖನದಲ್ಲಿ ತಿಳಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು.

–ತರಂಗಿಣಿ, ತುಮಕೂರು

### ಅತ್ತೆ ಹೆಚ್ಚೆ? ಸೊಸೆ ಹೆಚ್ಚೆ?

ಅತ್ತೆ ಸೊಸೆ ಕುರಿತು ಸುಶೀಲಾ ಡೋಣೂರರ ಬರಹ ಓದಿದಾಗ ಯಾರೂ ಹೆಚ್ಚಲ್ಲ, ಯಾರೂ ಕಡಿಮೆಯಲ್ಲ ಎಂಬುದು ಮತ್ತೆ ನೆನಪಿಗೆ ಬಂತು.

–‘ಸವಿ’, ತುಮಕೂರು

### ಹೊಟ್ಟೆ ಹುಣ್ಣಾಗುವಂತೆ ನಗಿಸಿತು

ಮಹೇಶ್‌ಚಂದ್ರ ಗುಬ್ಬಿಯವರ ‘ಹಳ್ಳಿ ಹೈದ ಕಂಡ ಇಂಗ್ಲಿಸ್ ವಿಂಗ್ಲಿಸ್ ಸಿಟಿ’ ಹಾಸ್ಯ ಬರಹ ಹೊಟ್ಟೆ ಹುಣ್ಣಾಗುವಂತೆ ನಗಿಸಿತು. ಹಾಸ್ಯ ಲೇಖನಗಳನ್ನು ದಯವಿಟ್ಟು ನಿರಂತರವಾಗಿ ಪ್ರಕಟಿಸಿರಿ.

–ಅಬ್ದುಲ್ ವಹ್ಹಾಬ್ ಮುಲ್ಲಾ, ಗಂಗಾವತಿ/ ಪಿ. ಸುಶೀಲಾ, ಪಿ. ರಾಮರಾವ್, ದಾವಣಗೆರೆ

### ಓದಿಸಿಕೊಂಡ ಭಾಷೆ

ಡಾ.ಎಸ್.ಬಿ.ಜೋಗುರ ಅವರ ‘ಕಿರಾತಕನ ಕರಾರು’ ಕಥೆ ಸರಾಗವಾಗಿ ಓದಿಸಿಕೊಂಡು ಹೋಯಿತು. ನಮ್ಮ ಭಾಗದ ಆಡುಭಾಷೆ ಖುಷಿ ನೀಡಿತು.

–ಬಿ.ಎಸ್.ಮುಳ್ಳೂರ, ಹಲಗತ್ತಿ

### ಕೇಶರಾಶಿಗೆ 12 ಸೂತ್ರಗಳು

ಹೊಳೆಯುವ ಕೇಶರಾಶಿಗೆ ಸುಚೇತನಾ ನಾಯ್ಕ ನೀಡಿರುವ 12 ಸೂತ್ರಗಳು ಯಶಸ್ವಿಯಾದರೆ ಎಲ್ಲರೂ ಚಿಂತೆಯಿಂದ ಮುಕ್ತಿ ಹೊಂದುವರು.

–ಎಸ್. ನಿತ್ಯ, ಮೂಡಬಿದಿರೆ

### ತಲೆಹರಟೆ ಉತ್ತರ!

‘ನೀವು ಕೇಳಿದಿರಿ?’ಯಲ್ಲಿ ‘ರಾವಣನ ವಿಳಾಸ ಸಿಕ್ಕಿದೆಯಾ ರಾಮ್?’ ಎಂಬ ಪ್ರಶ್ನೆಗೆ, ‘ಇನ್ನೂ ಯಾವ ಕೋತಿಯೂ ತಂದುಕೊಟ್ಟಿಲ್ಲ’ ಎಂಬ ಉತ್ತರ ಉದ್ಧಟತನದಿಂದ ಕೂಡಿದ್ದು ರಾಮಾಯಣದ ಹನುಮಂತನಿಗೆ ಅಪಚಾರ ಮಾಡಿದಂತಾಗಿದೆ. ರಾಮ್ ಇಂತಹ ತಲೆಹರಟೆ ಉತ್ತರ ಬಿಡಬೇಕು.

–ಗೌರಿಬಿದನೂರು ರಂಗಪ್ಪ, ಬೆಂಗಳೂರು